ನೋಟಿಫಿಕೇಷ್ಯನ್.

ತಾರೀಖು 17ನೇ ಡಿಸೆಂಬರ್ 1895.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಹಾಸನ ಡಿಸ್ಟ್ರಿಕ್ಟ್ ಅರಸೀಕೆರೆ ತಾಲ್ಲೂಕು ಬಾಣಾವಾರದ ಹೋಬಳಿ ಜೇಬಿರಾಖ್ ಚಿಕ್ಕ ಬಾಣಾವಾರ ಗ್ರಾಮದಲ್ಲಿ 146 ರೂಪಾಯಿ ಆಕಾರವುಳ್ಳ 196 ಎಕರೆ 32 ಗುಂಟೆ ಜಮೀನನ್ನು ಪೂರಾ ಆಕಾರಕ್ಕೆ ಸಾಗುವಳಿಗೆ ಹರಾಜಿಲ್ಲದೆ ಕೊಡಿಸಬೇಕು ಯಂತ ಬಾಣಾವಾರದಲ್ಲಿರುವ ಜಾವಗಲ್ಲು ವೆಂಕಟೇಶಯ್ಯ ದರಖಾಸ್ತು ಮಾಡಿದ್ದಾನೆ.

ಈ ಜಮೀನುಗಳಲ್ಲಿ 540 ದೊಡ್ಡ ಕೀಂದೀ ವೃಕ್ಷಗಳು 543 ಈಚಲುಗೊಂಬಿ ಸೊಸಿಗಳು 872 ಈಚಲು ಸಣ್ಣ ಸೊಸಿಗಳು 6 ಇತರ ಜಾತಿ ಮರಗಳು ಇರುವಂತೆಯೂ ಇವುಗಳಿಗೆ ಒಟ್ಟು ರೂ. 522-6-0 ಕಿಮ್ಮತ್ತು ಆಗುವದಾಗಿ ತಿಳಿಯಬರುತ್ತ, ಈ ಜಮೀನುಗಳನ್ನು ಮೂಲಕ ಹರಾಜ್ ಇಲ್ಲದೇನೇ ತನಿಗೆ ಕೊಡಿಸಬೇಕು. ಹಾಗೆ ಕೊಟ್ಟದ್ದೇ ಆದರೆ ಜಮೀನು ಸ್ವಾಧೀನವಾದ ಲಾಗಾಯತು ಒಂದು ವರುಷದಲ್ಲಿ (10) ವಕ್ಕಲು ಇರಲು ತಕ್ಕ ಮನೆಗಳನ್ನ ಕಟ್ಟಿ ವಕ್ಕಲನ್ನು ತಂದು ಇಟ್ಟು ಗ್ರಾಮ ಆಬಾದು ಮಾಡುವದಾಗಿಯೂ, ಮೇಲ್ಕಂಡ ವಾಯಿದೆ ಒಳಗೆ ಗ್ರಾಮ ಆಬಾದು ಮಾಡಲು ಖಾತರಿ ಬಗ್ಗೆ ಮಂದನೂರು ರೂಪಾಯಿಗಳನ್ನು ಹಾಜರ್ ಮಾಡುವದಾಗಿಯೂ, ವಾಯಿದೆ ಅಂದರೆಮಾರ್ ಗ್ರಾಮಕಟ್ಟಿ 10 ವಕ್ಕಲು ತಂದು ಇಡಲು ತಪ್ಪಿದರೆ ಡಿಪಾಜಿಟ್ ಇಡುವ ಮೊಬಲಗನ್ನು ಸರಕಾರಕ್ಕೆ ದಂಡವಾಗಿ ಜೆಗದ-ಕೊಳ್ಳಬಹುದೆಂದು ದರಖಾಸ್ತುದಾರ ಬರ್ಯೂ ಮಾಡುತ್ತಾನೆ. ಈ ದರಖಾಸ್ತುದಾರನ ಸವಾಲಿಗಿಂತ ಸರಕಾರಕ್ಕೆ ಫಾಯಿದೆ ಮತ್ತು ಅನುಕೂಲವಾದ ಸವಾಲ್ ಮಾಡಿ ಜಮೀನು ಪಡಿಯಲು ಇಚ್ಛೈಯುಳ್ಳವರು ಈ ಇಸ್ತಹಾರ್ ಹುಟ್ಟಿದ ತಾರೀಖು ಲಾಗಾಯತು 3 ತಿಂಗಳೊಳಗೆ ಅರಸೀಕೆರೆ ತಾಲ್ಲೂಕು ಅಮಲ್ದಾರ್ರಲ್ಲಿ ದರಖಾಸ್ತು ಮಾಡಬಹುದು.

ಈ ಮೇರೆ ಹಾಲಿ ಬಂದಿರುವ ದರಖಾಸ್ತಿಗಿಂತ ಅನುಕೂಲವಾದ ಸವಾಲುಗಳು ಮೇಲ್ಕಂಡ 3 ತಿಂಗಳೊಳಗಾಗಿ ಬಾರದೆ ಇದ್ದರೆ ಮೈಸೂರು ಲ್ಯಾಂಡ್ ರೆವಿನ್ಯೂ ರೂಲ್ಸಿನ XXನೇ ರೂಲ್ 18ನೇ ಪ್ಯಾರಾ ಪ್ರಕಾರ ದರಖಾಸ್ತುಗಳು ಅವುಗಳ ಯೋಗ್ಯತಾನುಸಾರವಾಗಿ ಫೈಸಲ್ಮಾಡಲ್ಪಡುವವು.

ಎ. ಕೃಷ್ಣಸ್ವಾಮಯ್ಯಂಗಾರ್,
ಡೆಪ್ಯುಟಿ ಕಮ್ಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟ್.

ಇ ಸಿ ಹಾರ್.

ಶಿವಮೊಗ್ಗ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರ ಕಛೇರಿಯಿಂದ.

ತಾರೀಖು 10ನೇ ಡಿಸೆಂಬರ್ 1895.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಶಿವಮೊಗ್ಗ ತಾಲ್ಲೂಕು ಹಿರಿಯೂರು ಮಾಗಣಿ ವೃಜನಿಪುರವೆಂಬ

			ರೂ. ಅ. ಪೈ.	
1ನೇ ಸಾಲಿಗೆ	...	ಕಂದಾಯ.	15—8—0	ಬೇಜಿರಾಖ್ ಗ್ರಾಮದಲ್ಲಿ ಬಂಜ
2ನೇ ಸಾಲಿಗೆ	..	ಡಿಟೋ	.. 31—0—0	ರನಲ್ಲಿರುವ ಯಕರೆ 82-31
3ನೇ ಸಾಲಿಗೆ	..	ಡಿಟೋ	.. 46—8—0	ಆಕಾರ ರೂಪಾಯಿ 154—
4ನೇ ಸಾಲಿಗೆ	..	ಡಿಟೋ	.. 62—0—0	8—0 ಉಳ್ಳ ಸಾಗುವಳಿ ಲಾ
5ನೇ ಸಾಲಿಗೆ	..	ಡಿಟೋ	.. 77—8—0	ಯಖಾ ವಿಶಿಷ್ಟ ಜಮೀನುಗ
6ನೇ ಸಾಲಿಗೆ	..	ಡಿಟೋ	.. 93—0—0	ಳನ್ನೂ ಬಾಜೂದಲ್ಲಿ ಕಾಣಿಸಿರು
7ನೇ ಸಾಲಿಗೆ	..	ಡಿಟೋ	.. 108—8—0	ವ ಅಳವೆ ಕಂದಾಯದ ಮೇ
8ನೇ ಸಾಲಿಗೆ	..	ಡಿಟೋ	.. 124—0—0	ಲಿ ಸಾಗುವಳಿಗೆ ಕೊಡಿಸಬೇ
9ನೇ ಸಾಲಿಗೆ	..	ಡಿಟೋ	.. 139—8—0	ಕೆಂತಲೂ ಸದರೀ ಜಮೀನುಗ
10ನೇ ಸಾಲಿಗೆ	..	ಡಿಟೋ	.. 154—8—0	ಳ ಮೇಲಿನ ಅಂದಾಜಾ ರೂಪಾ
				ಯಿ 25—7—0 ವೆಚನೆ

ಕೊಡುವದಾಗಿಯೂ ಸದರೀ 10 ಸಾಲಿ ಅಳವೆ ಕಾಲದಲ್ಲಿ ದರ್ ಸಾಲ್ 10ನೇ ವಂದು ಭಾಗದ ಮೇರೆಗೆ ಅಳವೆ ಆಖೈರ್ ವಾಯಿದೆ ಒಳಗೆ ಪೂರಾ ಜಮೀನು ಕಿರ್ದಿಗೆ ತಂದು ಸಾಗುವಳಿ ಮಾಡುವದಾಗಿಯೂ ತಪ್ಪಿದರೆ ಸದರೀ ಜಮೀನುಗಳಿಗೆ ಪುರೂ ಸಾಲ್ ಲಾಗಾಯತು ಸರಕಾರಕ್ಕೆ ಭರ ಆಕಾರ ಕೊಡುವದಾಗಿಯೂ ಈ ಷರತ್ತುಗಳ ಮೇಲೆ ಸಾಗುವಳಿಗೆ ಕೊಡಿಸಬೇಕೆಂದು ಹಿರಿಯೂರ ಖಾನಭೋಗ ವೀತಾರಾಮಪ್ಪ 1 ಪಟೇಲ್ ಜಗನ್ನಾಥಪ್ಪಸಾಬ್ 1 ಇವರಿಬ್ಬರೂ ದರಖಾಸ್ತು ಕೊಟ್ಟಿರುತ್ತಾರೆ. ಆದ್ದರಿಂದ ದರಖಾಸ್ತು ಮಾಡಲ್ಪಟ್ಟ ಜಮೀನುಗಳಿಗನ್ನು ಭರ ಆಕಾರದ ಮೇಲಾಗಲಿ ಅಥವಾ ಮೇಲೆ ಕಂಡ ದರಖಾಸ್ತುದಾರ ನಪೂರಿಸುವ ಅಳವೆ ಕಾಲ ಮತ್ತು ಷರತ್ತುಗಳಿಗಿಂತಲೂ ಕಿಮ್ಮತ್ತಾದ ಕಾಲ (ವ ಷರತ್ತುಗಳ ಮೇಲಾಗಲಿ) ಅಥವಾ ಸರಕಾರಕ್ಕೆ ಲಾಭಕರವಾದ ಇತರ ಷರತ್ತು ವಗೈರೆ ಮೇಲಾಗಲಿ ದರಖಾಸ್ತು ಮಾಡಲಪೇಕ್ಷೆಯುಳ್ಳವರು ಈ ತಾರೀಖು ಲಾಗಾಯತು 3 ತಿಂಗಳೊಳಗೆ ದರಖಾಸ್ತು ಕೊಡಬಹುದು. ಆ ಪ್ರಕಾರ ದರಖಾಸ್ತುಗಳು ಬಾರದೆ ಇದ್ದಲ್ಲಿ ಲ್ಯಾಂಡ್ ರೆವಿನ್ಯೂ ರೂಲ್ಸ್ 20ನೇ ಕಲಂ 18ನೇ ಪ್ಯಾರಾ ಪ್ರಕಾರ ಯುಕ್ತ ಕಂಡ ರೀತಿ ವೆವಸ್ತೆ ಪಡಿಸಿಕೊಡಲ್ಪಡುತ್ತದೆ.

ಎ. ರಂಗಸ್ವಾಮಯ್ಯಂಗಾರ್, ಡೆಪ್ಯುಟಿ ಕಮ್ಮಿಷನರ್.

ಜಪ್ತಿರೇಪಟ್ಟು.

ತಾರೀಖು 11ನೇ ಡಿಸೆಂಬರ್ 1895.

ಶಿವಮೊಗ್ಗ ಟವನ್ನಲ್ಲಿ ರಾಮಚಂದ್ರಾಚಾರ್ಯರವರ ಮನೆಯಲ್ಲಿ 1895ನೇ ಇಸವಿ ಜನವರಿ ತಾರೀಖು 14ನೇ ರಾತ್ರಿ ಕನ್ನಕಳವು ಕೃತ್ಯನಡಿಸಿ ಪರಾರಿ ಆಗಿರತಕ್ಕವನ ಜಪ್ತಿಪಟ್ಟು—ಶಿವಮೊಗ್ಗ ಡಿಸ್ಟ್ರಿಕ್ಟ್ 2ನೇ ಅಸಿಸ್ಟೆಂಟ್ ಕಮ್ಮಿಷನರ್ ಮತ್ತು 1ನೇ ಕ್ಲಾಸ್ ಮೇಜಿಸ್ಟ್ರೇಟರವರ ಕೋರ್ಟಿನಿಂದ ವಾರಂಟು ಹುಟ್ಟಿರುತ್ತದೆ.

(ಶಿವಮೊಗ್ಗ ಟರ್ವ ಕ್ರೈಂ ನಂಬರ್ 14—1894—95.

ಹೆಸರು—ಬಾರಾಯಿವಮ್ಮಾ, ತಂದೆ ಹೆಸರು—ಬುರ್ಡಸಾಬ್, ಜಾತಿ—ಮುಸಲ್ಮಾ, ವಾಸಸ್ಥಾನ—ಶಿವಮೊಗ್ಗ ತಾಲ್ಲೂಕು ಮದಾರಿಪಾಳ್ಯ, ವಯಸ್ಸು—45 ವರುಷ, ಯತ್ತ—5 ಅಡಿ 4 ಅಂಗುಲ, ವರ್ಣ—ಯಣಿಗೆಂಪು, ಗುರ್ತಿಸತಕ್ಕ ಇತರೆ ಗುರ್ತುಗಳು.

ಜೊರುಮುಖ—ವಿಶಿ ಬಿಟ್ಟಿದ್ದಾನೆ, ವಯಸ್ಸು ಆದಹಾಗೆ ಕಾಣುತ್ತಾನೆ ಯಡಗಡೆ ತೊಡೆಮೇಲೆ ಬರೆಹಾಕಿದ ಗುರ್ತುಇದೆ, ಮೊಣಕಾಲು ಚಿಪ್ಪಿನ ಮೇಲೆ ಘಾಯದ ಕಲೆಗಳು ಇರುತ್ತವೆ. ಮುಸಲ್ಮಾನಿ ಮತ್ತು ಕನ್ನಡ ಮಾತು ಆಡುತ್ತಾನೆ, 1882ನೇ ಇಸವಿಯಲ್ಲಿ ಶಿವಮೊಗ್ಗ ಡಿಸ್ಟ್ರಿಕ್ಟ್ 1ನೇ ಅಸಿಸ್ಟೆಂಟ್ ಕಮ್ಮಿಷನರ್ ಮತ್ತು 1ನೇ ಕ್ಲಾಸ್ ಮೇಜಿಸ್ಟ್ರೇಟರವರ ಕೋರ್ಟಿನಲ್ಲಿ ಇದೇ ತರವಾದ ತಕ್ಕೀರಿಗೆ 2 ವರುಷ ಕಠಿಣ ಸಜಾ ಆಗಿರುತ್ತದೆ, ಸಂಬಂಧೀಕರು ಚೀಲೂರು ಹತ್ತರದ (ತಾಲ್ಲೂಕ್ ಹೊನ್ನಾಳಿ) ಗ್ರಾಮಗಳಲ್ಲಿರುತ್ತಾರೆ, ಹೆಂಡರು ಮಕ್ಕಳು ಶಿವಮೊಗ್ಗ ತಾಲ್ಲೂಕು ಮದಾರಿಪಾಳ್ಯದಲ್ಲಿ ವಾಸವಾಗಿದ್ದಾರೆ.

ಆರ್. ಬಿ. ಪ್ಲೂಮರ್,
ಅಸಿಸ್ಟೆಂಟ್ ಕಮ್ಮಿಷನರ್ ಇನ್‌ಚಾರ್ಜ್ ಆಫ್ ಶಿವಮೊಗ್ಗ ಡಿಸ್ಟ್ರಿಕ್ಟ್ ಪೊಲೀಸ್.

ಫಾರೆಸ್ಟ್ ಇಲಾಖೆ.

ತಾರೀಖು 13ನೇ ಡಿಸೆಂಬರ್ 1895ನೇ ಇಸವಿ.

ಸ್ ೧೮೯೦ನೇ ಇಸವಿ ಫೆಬ್ರವರಿ ತಾರೀಖು 15ನೇ ಮೈಸೂರು ಗೆಜೆಟ್ 2ನೇ ಭಾಗದ ಪುಟದಲ್ಲಿ ಘಾಯಿಷ್‌ಮೂಡಿರುವ ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರ ನೋಟಿಫಿಕೇಷನ್ ಅನುಸರಿಸಿ, ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ, ಈ ಕಳಗೆ ನಮೂದಿಸುವ ಶಿವಮೊಗ್ಗ ಡಿಸ್ಟ್ರಿಕ್ಟಿನ ಬೆಂಕಿಯಿಂದ ರಕ್ಷಿಸಲ್ಪಟ್ಟ ಸ್ಟೇಟ್ ಫಾರೆಸ್ಟ್ ಮತ್ತು ಪ್ರೈವೇಟೇಷನ್‌ಗಳನ್ನ 1896ನೇ ಇಸವಿ ಜನವರಿ 1ನೇ ತಾರೀಖು ಲಾಗಾಯಿತು ಮೇ ಆಬೈರುವರಿಗೂ ಬಂದಮಾಡಲ್ಪಟ್ಟಿರುತ್ತೆ. ಅಂಬುಗಾರರಿಗೂ, ಷಿಕಾರಿಗಳಿಗೂ, ಬೇಟೆಗಾರರಿಗೂ ಸಹ ಲೈಸೆನ್ಸು ಕೊಡಲ್ಪಡುವದಿಲ್ಲ. ರೂಲ್ಸ್ ಅತಿಕ್ರಮಿಸಿ ಪ್ರವೇಶಿಸುವವರನ್ನ ಕ್ರಮವಾಗಿ ಶಿಕ್ಷಿಸಲ್ಪಡುತ್ತೆ.

ನಂಬರು.	ಫಾರೆಸ್ಟುಗಳ ಹೆಸರು.	ತಾಲ್ಲೂಕುಗಳ ಹೆಸರು.
1	ಕಂಕರಗುಡ್ಡಾ, ಭೂತನಬೈಲ ಫಾರೆಸ್ಟ್	ಶಿವಮೊಗ್ಗ ತೀರ್ಥಹಳ್ಳಿ
2	ಪುರದಹಾಳ	ಶಿವಮೊಗ್ಗ
3	ಕುಂಚೇನಹಳ್ಳಿ	ಡಿಟೋ
4	ಅನಪಿನಕಟ್ಟೆ ಪ್ರೈವೇಟೇಷನ್	ಡಿಟೋ
5	ಸಕ್ರೆಬೈಲು ಫಾರೆಸ್ಟ್	ಡಿಟೋ ತೀರ್ಥಹಳ್ಳಿ
6	ಡಿಟೋ ಪ್ರೈವೇಟೇಷನ್	ಶಿವಮೊಗ್ಗ
7	ಚೋರನೆಡೆಹಳ್ಳಿ	ಡಿಟೋ
8	ಆಯನೂರು ಪ್ರೈವೇಟೇಷನ್	ಡಿಟೋ
9	ಅಲಕೊಳ ಡಿಟೋ	ಡಿಟೋ
10	ಕರ್ಲಕೊಪ್ಪ ಸಂದಲ್ ಪ್ರೈವೇಟೇಷನ್	ಡಿಟೋ
11	ಪುಂಬಳಿ ಬೈಲು ಹುಣಸೆಕಟ್ಟೆ	ಡಿಟೋ
12	ಆಲರಹಾರ	ಡಿಟೋ
13	ಕುಂಚಿ	ಡಿಟೋ
14	ಮಸರೂರು	ನಗರ
15	ಕುಕ್ಕವಾಡಾ ವೆಬ್ಯಾಣಿ	ಶಿವಮೊಗ್ಗ ಚನ್ನಗಿರಿ, ತರೀಕೆರೆ
16	ಚನ್ನಗಿರಿ ಪ್ರೈವೇಟೇಷನ್	ಚನ್ನಗಿರಿ
17	ತೆಲ್ಲಗಡೆ, ಆರ ತೆಲಗಡೆ	ಸೊರಬ
18	ಬೆಟ್ಟದ ಕುರ್ಲಿ	ಡಿಟೋ
19	ಕಿದ್ದೆಹಳ್ಳಿ ಪ್ರೈವೇಟೇಷನ್	ಡಿಟೋ
20	ಹಳೆಸೊರಬ ಡಿಟೋ	ಡಿಟೋ
21	ಡಂಡ್ಯಗುತ್ತಿ	ಡಿಟೋ
22	ಕವಡಿ	ಡಿಟೋ
23	ಕವಲಿ	ಶಿಕಾರಿಪುರ
24	ತೋಗರಸಿ	ಡಿಟೋ
25	ಬಸವನಬಿದಿಹಳ್ಳಿ	ಡಿಟೋ
26	ಕಾಳೆನಹಳ್ಳಿ ಪ್ರೈವೇಟೇಷನ್	ಡಿಟೋ
27	ಗಂಗವನಸರ ಸ್ಟೇಟ್ ಫಾರೆಸ್ಟ್ ಮತ್ತು ಹಾರೋಗೊಪ್ಪ ಯೆರೆಳ ಟ್ಟೆ ಕಾಪಿಸು ಜಾಗ	ಡಿಟೋ ಹೊನ್ನಾಳಿ
28	ಕರಡಿಬೆಟ್ಟ	ಡಿಟೋ ಶಿವಮೊಗ್ಗ
29	ಚಂದ್ರಕಲ	ಶಿಕಾರಿಪುರ
30	ಬೆಳಂದೂರು	ಡಿಟೋ
31	ಮುಲಂದೂರು	ಸಾಗರ
32	ಮಲೆಬೆನ್ನೂರು	ಹೊನ್ನಾಳಿ, ದಾವಣಗೆರೆ

ಸಿ. ನಾರಾಯಣರಾವ್,
ಡೆಪ್ಯುಟಿ ಕನ್ಸರ್ವೇಟರ್